**S.C.No.255/23**
**P.W.-16**
**C.W.-10**

**ದಿನಾಂಕಃ 19.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಆರೋಪಿಗಳ ಪರ ವಕೀಲರಿಂದಃ –**

2. ನಾನು ನನ್ನ ತಂದೆ ತೀರಿಕೊಳ್ಳುವ ಕಾಲಕ್ಕೆ ಬೆಂಗಳೂರಿನಲ್ಲಿ ಸುಮಾರು ಒಂದು ವರ್ಷ ಕೆಲಸ ಮಾಡಿರುತ್ತೇನೆ. ನನ್ನ ತಾಯಿ ಚಿಕ್ಕರಾಚಶೆಟ್ಟಿಯವರನ್ನು ಮದುವೆಯಾಗುವ ಮುಂಚೆ ಅವರು ಬಸಮ್ಮ ಎನ್ನುವವರ ಜೊತೆ ಮದುವೆಯಾಗಿ , ಅವರಿಗೆ 6 ಜನ ಮಕ್ಕಳು ಇದ್ದರು ಎಂದರೆ ಸರಿ. ನನ್ನ ತಂದೆ, ನನ್ನ ತಾಯಿ ಜಯಮ್ಮ ರವರನ್ನು ಮದುವೆಯಾಗುವ ಮುಂಚೆ, ಬಸಮ್ಮರವರಿಂದ ನ್ಯಾಯಾಲಯದಲ್ಲಿ ವಿಚ್ಛೇದನೆ ಪಡೆದುಕೊಂಡಿರುವುದಿಲ್ಲ . ನನ್ನ ಅಣ್ಣ ಶ್ರೀಕಂಠ ಹುರಳೀಪುರದಲ್ಲಿ ಯಾವತ್ತೂ ವಾಸವಾಗಿರಲಿಲ್ಲ ಎಂದರೆ ಸರಿ.

3. ಹುಣಸನಾಳು ಗ್ರಾಮದಿಂದ ನಂಜನಗೂಡಿಗೆ ಬರಲು ಬಸ್ ನಲ್ಲಿ ಅರ್ದ ಗಂಟೆ ಬೇಕಾಗುತ್ತದೆ ಎಂದರೆ ಸರಿ. ನನ್ನ ಅಣ್ಣ ಶ್ರೀಕಂಠ 6 ನೇ ತರಗತಿಯವರಗೆ ವಿದ್ಯಾಭ್ಯಾಸ ಮಾಡಿರುತ್ತಾರೆ. ಅವರು 6 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದರಿಂದ ಚಿಕ್ಕ ವಯಸ್ಸಿನಿಂದ ನಂಜನಗೂಡಿಗೆ ಬಂದು ಹೋಗುವ ಅಭ್ಯಾಸ ಇರುತ್ತದೆ ಎಂದರೆ ಸರಿ. ನನ್ನ ತಂದೆ ತೀರಿಕೊಳ್ಳುವ ಕಾಲಕ್ಕೆ ನನ್ನ ಅಣ್ಣ ಶ್ರೀಕಂಠನಿಗೆ ಮದುವೆಯಾಗಿ 7 ವರ್ಷಗಳಾಗಿರುತ್ತದೆ.

4. ನನ್ನ ಅತ್ತಿಗೆ, ಅಂದರೆ ಶ್ರೀಕಂಠನ ಹೆಂಡತಿ ನಂಜನಗೂಡಿನ ಟೌನ್‌ನವರಾಗಿರುತ್ತಾರೆ ಎಂದರೆ ಸರಿ. ಚಾಮಲಾಪುರದಲ್ಲಿ ನನ್ನ ಅತ್ತಿಗೆಯ ತಂದೆ, ತಾಯಿ, ಅಣ್ಣ ತಮ್ಮಂದಿರು ವಾಸವಾಗಿರುತ್ತಾರೆ ಎಂದರೆ ಸರಿ. ಚಾಮಾಲಾಪುರದಿಂದ ನಂಜನಗೂಡು ಟೌನ್ ಪೊಲೀಸ್ ಠಾಣೆ ಎಷ್ಟು ಅಂತರದಲ್ಲಿ ಇರುತ್ತದೆ ಎಂದರೆ ಸಾಕ್ಷಿಯೂ 3–4 ಕಿಮೀ ಇರುತ್ತದೆ ಎಂದು ನುಡಿಯುತ್ತಾರೆ. ಚಾಮಾಲಾಪುರದಿಂದ ನಂಜನಗೂಡು ಟೌನ್ ಕೇವಲ 1 ಕಿ.ಮೀ ಅಂತರದಲ್ಲಿರುತ್ತದೆ ಎಂದರೆ ಸಾಕ್ಷಿಯೂ ಹೆಚ್ಚಿಗೆ ಇರುತ್ತದೆ ಎಂದು ನುಡಿಯುತ್ತಾರೆ.

5. ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ತಾನವನ್ನು ನಾನು ನೋಡಿರುತ್ತೇನೆ. ಶ್ರೀಕಂಠೇಶ್ವರ ದೇವಸ್ಥಾನದಿಂದ ಊಟಿಯ ಮುಖ್ಯ ರಸ್ತೆಗೆ ಬಂದರೆ , ಪೊಲೀಸ್ ಠಾಣೆ ಇರುತ್ತದೆ ಎಂದರೆ ಸರಿ.

6. ನಿಮ್ಮ ಮುಖ್ಯ ವಿಚಾರಣೆಯಲ್ಲಿ 'ನನ್ನ ಪ್ರಾಥಮಿಕ ವಿದ್ಯಾಭ್ಯಾಸ ಬೆಳವಾಡಿ ಗ್ರಾಮದಲ್ಲಿ ಆಗಿತ್ತು. ಆ ಸಮಯದಲ್ಲಿ ನಾನು ನನ್ನ ಅಜ್ಜಿಯ ಜೊತೆ ಇದ್ದೆನು. ನಂತರ 10 ನೇ ತರಗತಿ ಕೂಡ್ಲಪುರದಲ್ಲಿ ಆಗಿರುತ್ತದೆ. ಕೂಡ್ಲಾಪುರದಲ್ಲಿ ಶಾಲೆಗೆ ಹೋಗುವ ಕಾಲದಲ್ಲಿ ನಮ್ಮ ತಂದೆಯ ಹುಣಸನಾಳು ಗ್ರಾಮದಲ್ಲಿ ನಮ್ಮ ತಂದೆಯ ಜೊತೆ ವಾಸವಿದ್ದೇನು. ಹುಣಸನಾಳು ಗ್ರಾಮದಲ್ಲಿ ನಾನು, ನನ್ನ ತಂದೆ ಮತ್ತು ನನ್ನ ಅಣ್ಣ ವಾಸವಿದ್ದೇವು. ನನ್ನ ತಂದೆಯ ಮೊದಲನೆ ಹೆಂಡತಿ ಮತ್ತು ಮಕ್ಕಳು ಪ್ರತ್ಯೇಕವಾಗಿ ವಾಸವಿರುತ್ತಿದ್ದರು ಎಂದು ಹೇಳಿದ್ದು, ನೀವು ಬೆಳವಾಡಿ ಕೂಡ್ಲಾಪುರದಲ್ಲಿ ವಿದ್ಯಾಭ್ಯಾಸ ಮಾಡಿದ್ದ ಬಗ್ಗೆ ದಾಖಲೆಯನ್ನು ಪೊಲೀಸರಿಗೆ ನೀಡಿರುತ್ತೀರಿಯೇ ಎಂದರೆ ಸಾಕ್ಷಿಯೂ ಅವರು ಕೇಳಿರುವುದಿಲ್ಲ ನಾನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ.

7. ನಿಮಗೆ ತಿಳುವಳಿಕೆ ಬಂದ ನಂತರ ಯಾವಾಗ ನಿಮ್ಮ ತಾಯಿ ಜಯಮ್ಮನಿಗೆ ಮತ್ತು ನಿಮ್ಮ ತಂದೆಗೆ ಮದುವೆಯಾಗಿರುತ್ತದೆ ಎಂದು ತಿಳಿದುಕೊಂಡಿರುತ್ತೀರಿಯೆ ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ. ನನಗೆ ತಿಳುವಳಿಕೆ ಬಂದಾಗಿನಿಂದ ನಾನು ಹುರಳೇಪುರದಲ್ಲಿ ವಾಸವಿದ್ದು, ಹುಣಸಾನಾಳುವಿನಲ್ಲಿ ಯಾವತ್ತೂ ಕೂಡ ವಾಸ ಇರಲಿಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ 2012 ರಲ್ಲಿ ಜಮೀನಿನ ವಿಚಾರಕ್ಕೆ ಗಲಾಟೆಯಾಗಿ, ದೂರನ್ನು ನೀಡಿದ್ದರು ಎಂದು ಹೇಳಿದ್ದು, ಯಾವ ಪೊಲೀಸ್ ಠಾಣೆ ಗೆ ದೂರನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯೂ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಈ ರೀತಿ ಜಮೀನಿನ ವಿಚಾರಕ್ಕೆ ಗಲಾಟೆಯಾಗಿ, ದೂರಾಗಿತ್ತು ಎಂದು ತೋರಿಸಲು ಈ ಪ್ರಕರಣದಲ್ಲಿ ಸದರಿ ದೂರಿಗೆ ಸಂಬಂಧಪಟ್ಟ

ದಾಖಲೆಯನ್ನು ನೀಡಿರುತ್ತಿರಿಯೇ ಎಂದರೆ ಸಾಕ್ಷಿಯೂ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಯಾರು ನೀಡಿರುತ್ತಾರೆ ಎಂದರೆ ಸಾಕ್ಷಿಯೂ ನಾನೇ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ತಂದೆ ತೀರಿಕೊಂಡ ಎಷ್ಟು ದಿನಕ್ಕೆ ದಾಖಲೆಯನ್ನು ಪೊಲೀಸರಿಗೆ ನೀಡಿರುತ್ತೀರಿ ಎಂದರೆ ಸಾಕ್ಷಿಯೂ 8–10 ದಿನಗಳ ನಂತರ ದಾಖಲೆಯನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ದಾಖಲೆಗಳನ್ನು ಪೊಲೀಸರಿಗೆ ನೀಡಿದರ ಬಗ್ಗೆ ಹೇಳಿಕೆಯನ್ನು ನೀಡಿರುವುದಿಲ್ಲ. ಅದೇ ರೀತಿ ಮಹಜರ್ ನ್ನು ಜರುಗಿಸಿ ನಿಮ್ಮ ಸಹಿಯನ್ನು ಪಡೆದಿರುತ್ತಾರೆಯೇ ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ. ನಾನು ಹೇಳಿದಂತೆ ಯಾವುದೇ ಕ್ರಿಮಿನಲ್ ಪ್ರಕರಣ ದಾಖಲಾಗಿರುವುದಿಲ್ಲ, ದೂರನ್ನು ಕೂಡ ಸಲ್ಲಿಸಿರುವುದಿಲ್ಲ, ಪೊಲೀಸರಿಗೆ ದಾಖಲೆಯನ್ನು ನೀಡುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8. ಸಿವಿಲ್ ವ್ಯಾಜ್ಯಗಳು ನಂಜನಗೂಡು ನ್ಯಾಯಾಲಯದಲ್ಲಿ ಜಿಲ್ಲಾ ನ್ಯಾಯಾಲಯದಲ್ಲಿ ಮತ್ತು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನಡೆದಿರುತ್ತವೆ ಎಂದು ಹೇಳಿದ್ದು, ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪೊಲೀಸರಿಗೆ ನೀಡಿರುತ್ತಿರಿಯೇ ಎಂದರೆ ಸಾಕ್ಷಿಯೂ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ಸಹ ಮೇಲೆ ಹೇಳಿದಂತೆ ದೂರಿನ ದಾಖಲೆಗಳನ್ನು ನೀಡಿದ ಸಮಯದಲ್ಲಿ ಅಂದರೆ 8–10 ದಿನಗಳ ನಂತರ ನೀಡಿರುತ್ತೇನೆ. ನಾನು ಆ ಸಮಯದಲ್ಲಿ ಸಿವಿಲ್ ವಾಜ್ಯಗಳಿಗೆ ಸಂಬಂಧಪಟ್ಟ ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ , ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

9. ಮುಖ್ಯ ವಿಚಾರಣೆಯಲ್ಲಿ ಮತ್ತೊಮ್ಮೆ ಗಲಾಟೆಯಾಗಿ ನಿಮ್ಮ ತಾಯಿಯ ಮೇಲೆ ಹಲ್ಲೆಯಾಗಿರುತ್ತದೆ ಎಂದು ಹೇಳಿದ್ದು, ಯಾವ ದಿನಾಂಕ ಮತ್ತು ತಿಂಗಳಿನಲ್ಲಿ ಗಲಾಟೆಯಾಗಿರುತ್ತದೆ ಎಂದರೆ ಸಾಕ್ಷಿಯೂ ದಿನಾಂಕ ಮತ್ತು ತಿಂಗಳು ನೆನಪಿರುವುದಿಲ್ಲ. ಆದರೆ 2017 ರಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಈ ಘಟನೆಗೆ ಸಂಬಂಧಪಟ್ಟಂತೆ ದಾಖಲೆಯನ್ನು ಪೊಲೀಸರಿಗೆ ನೀಡಿರುತ್ತೀರಿಯೇ

ಎಂದರೆ ಸಾಕ್ಷಿಯೂ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಯಾವಾಗ ನೀಡಿರುತ್ತೀರಿ ಎಂದರೆ ಸಾಕ್ಷಿಯೂ ಈ ಮೇಲೆ ಹೇಳಿದ ದಾಖಲೆಗಳನ್ನು ನೀಡಿದ ಸಮಯದಲ್ಲಿಯೇ ನೀಡಿರುತ್ತೇನೆ ಎಂದು ನುಡಿಯುತ್ತಾರೆ.

10. 2017 ರಲ್ಲಿ ಹುಣಸಾನಾಳು ಗ್ರಾಮವನ್ನು ಬಿಟ್ಟಿರುತ್ತೇನೆ ಎಂದು ಹೇಳಿದು, ಅದಕ್ಕೂ ಮುಂಚೆ ನಾನು, ನನ್ನ ತಂದೆ ಹುಣಸನಾಳುವಿನಲ್ಲಿ ವಾಸವಿದ್ದೇವು ಎಂದು ತೋರಿಸಲು ದಾಖಲೆಗಳನ್ನು ಪೊಲೀಸರಿಗೆ ನೀಡಿರುತ್ತೀರಿಯೇ ಎಂದರೆ ಸಾಕ್ಷಿಯೂ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಈ ದಾಖಲೆಗಳನ್ನು ಸಹ ಈ ಮೇಲೆ ಹೇಳಿದ ಸಮಯದಲ್ಲಿಯೇ ನೀಡಿರುತ್ತೇನೆ. ನಾನು ಹೇಳಿದಂತೆ ಯಾವುದೆ ಕೃತ್ಯ ನಡೆರುವುದಿಲ್ಲ, ಹಾಗಾಗಿ ಯಾವುದೇ ದಾಖಲೆಗಳನ್ನು ಪೊಲೀಸರಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಹುಣಸನಾಳುವಿಗೆ ಬಂದಿರುತ್ತೇವೆ ಎಂದು ಹೇಳಿದ್ದು, ಅಲ್ಲಿ ನಮ್ಮ ಕುಟುಂಬ ಯಾವ ಮನೆಯಲ್ಲಿ ವಾಸವಿತ್ತು, ಅದೇ ಮನೆಯಲ್ಲಿ ನನ್ನ ಅಣ್ಣ ವಾಸವಿದ್ದ ಎಂದರೆ ಸರಿ.

11. ನನ್ನ ತಂದೆಗೂ ಮತ್ತು ನನ್ನ ಅಣ್ಣನಿಗೂ ಸಂಬಂಧ ಸರಿ ಇರಲಿಲ್ಲ. ಆ ಕಾರಣ ನನ್ನ ಅಣ್ಣ ಹುರಳೇಪುರಕ್ಕೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ ಹುರಳೇಪುರಕ್ಕೆ ಯಾವತ್ತೂ ಕೂಡ ಬಂದಿರುವುದಿಲ್ಲ ಎಂದರೆ ಸರಿಯಲ್ಲ.

12. ದಿ.01.06.2023 ರಲ್ಲಿ ನಾನು, ನನ್ನ ಕೆಲಸದಲ್ಲಿ ನಾನು ಬೆಂಗಳೂರಿನಲ್ಲಿ ಇದ್ದೆ ಎಂದರೆ ಸರಿ. ನಂತರ ನನ್ನ ತಂದೆಯ ಶವವನ್ನು ಮೊದಲು ನಾನು ಕೆ ಆರ್ ಆಸ್ಪತ್ರೆಯಲ್ಲಿ ನೋಡಿರುತ್ತೇನೆ. ದಿ.01.06.2023 ರಲ್ಲಿ ನಾನು ಬೆಂಗಳೂರಿನಲ್ಲಿ ಇದ್ದು, ನಂತರ ಶವವನ್ನು ಮೊದಲ ಬಾರಿ ಕೆ ಆರ್ ಆಸ್ಪತ್ರೆಯಲ್ಲಿ ನೋಡಿದ್ದು, ಈ ಮಧ್ಯೆ ಹುಣಸನಾಳುವಿನಲ್ಲಿ ಏನು ನಡೆಯಿತು ಎಂದು ನಾನು ಖುದ್ದು ನೋಡಿರುವುದಿಲ್ಲ ಎಂದರೆ ಸರಿ.

13. ನಿಮ್ಮ ಮುಖ್ಯ ವಿಚಾರಣೆಯಲ್ಲಿ ನಿಮ್ಮ ತಂದೆ ಸೈಟಿನ ಅಳತೆ ಮಾಡಲು ಬಂದಿದ್ದರು ಎಂದು ಹೇಳಿದ್ದು , ನಿಮ್ಮ ತಂದೆ ತೀರಿಕೊಂಡ ನಂತರ ಗ್ರಾಮ ಪಂಚಾಯಿತಿಯವರು ಸೈಟ್ ಅಳತೆಗೆ ನೀಡಿದ ಅರ್ಜಿ ಮತ್ತು ಗ್ರಾಮ ಪಂಚಾಯಿತಿಯವರು ಅಳತೆಗೆ ನೇಮಕ ಮಾಡಿದ ಬಗ್ಗೆ ಯಾವುದಾದರೂ ದಾಖಲೆಯನ್ನು ಪಡೆದುಕೊಂಡು ಪೊಲೀಸರಿಗೆ ನೀಡಿರುತ್ತೀರಿಯೇ ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ. ಮುಖ್ಯ ವಿಚಾರಣೆಯಲ್ಲಿ ಮದ್ಯಾಹ್ನ 01.00 ಗಂಟೆಗೆ ನಿಮ್ಮ ತಾಯಿ, ನಿಮ್ಮ ತಂದೆಗೆ ಫೋನ್ ಮಾಡಿದ್ದು , ಫೋನ್ ತಲುಪಿಲ್ಲ ಎಂದು ಹೇಳಿರುತ್ತಾರೆ ಎಂದು ನುಡಿದಿದ್ದು , ಅವರು ಯಾವ ನಂಬರ್ ನಿಂದ ಫೋನ್ ಮಾಡಿರುತ್ತಾರೆ ಎಂದರೆ ಸಾಕ್ಷಿಯೂ ಫೋನ್ ನಂಬರ್ ತಿಳಿದಿರುವುದಿಲ್ಲ, ನಮ್ಮ ಸಂಬಂಧಿಕರ ಫೋನ್ ನಂಬರ್ ನಿಂದ ಕರೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ಸಂಬಂಧಿಕರಿಂದ ಫೋನ್ ಪಡೆದು ಕರೆ ಮಾಡಿರುತ್ತಾರೆ ಎಂದರೆ ಸಾಕ್ಷಿಯೂ ಮಲ್ಲೇಶ್ ನಿಂದ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ತಂದೆಗೆ ಫೊನ್ ತಲುಪಿ, ಅವರು ಎಲ್ಲಿ ಹೋಗಿರುತ್ತಾರೆ ಎಂದು ತಿಳಿಯುತ್ತಿಲ್ಲ ಎಂದ ತಕ್ಷಣ ಹುಣಸನಾಳುವಿಗೆ ಬರಲು, ಪ್ರಯತ್ನಿಸಿರುತ್ತೀರಿಯೇ ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ, ನನಗೆ ಫೋನ್ ಮಾಡಿ ಯಾವುದೇ ವಿಚಾರ ತಿಳಿಸಿರುವುದಿಲ್ಲ, ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

14. ನಿಮ್ಮ ಮುಖ್ಯ ವಿಚಾರಣೆಯಲ್ಲಿ, ನಿಮ್ಮ ಅಣ್ಣನಿಗೆ ಫೋನ್ ಕರೆ ಮಾಡಿ ಹುಣಸನಾಳು ಮನೆಗೆ ಹೋಗಿ ನೋಡು ಎಂದು ಹೇಳಿರುತ್ತೀರಿ ಎಂದು ನುಡಿದಿದ್ದು, ನಿಮ್ಮ ಅಣ್ಣ ಮೊಬೈಲ್ ಯಾವ ನಂಬರ್ ಗೆ ಫೋನ್ ಕರೆ ಮಾಡಿರುತ್ತಾರೆ ಎಂದರೆ ಸಾಕ್ಷಿಯೂ **9535164194** ಮೊಬೈಲ್ ನಂಬರ್ ಗೆ ಫೋನ್ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನನ್ನ ಅಣ್ಣನ ಬಳಿ ಯಾವುದೇ ಮೊಬೈಲ್ ಇರಲಿಲ್ಲ, ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

15. ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಿಮ್ಮ ಅಣ್ಣ ನಿಮ್ಮ ಸೂಚನೆಯ ಮೇರೆಗೆ ಮನೆಗೆ ಹೋಗಿ ನೋಡಿ , 04.00–04.30 ಕ್ಕೆ ಪೋನ್ ಕರೆ ಮಾಡಿದ, ಆಗ ಗಾಬರಿಯಲ್ಲಿದ್ದ ಎಂದು ಹೇಳಿದ್ದು , ಆ ರೀತಿ ನನ್ನ ಅಣ್ಣ ಯಾವುದೇ ಪೋನ್ ಕರೆ ಮಾಡಿರುವುದಿಲ್ಲ. ಆ ರೀತಿ ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಿಮ್ಮ ಅಣ್ಣ ತಂದೆ ತೀರಿಹೋಗಿರುತ್ತಾರೆ ಎಂದು ಹೇಳಿದಾಗ, ತಕ್ಷಣಕ್ಕೆ ನಂಜನಗೂಡಿಗೆ ಹೋಗಿ, ಪೊಲೀಸರಿಗೆ ದೂರು ನೀಡಲು ನೀವು ತಿಳಿಸಿರುತ್ತೀರಿಯ ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ.

16. ನೀವು ಮೊದಲು ವಾಸವಿದ್ದ ಹುಣಸನಾಳು ಮನೆಯಲ್ಲಿ ಹೊರಗಡೆ ಹೋಗುವಾಗ ಮನೆಗೆ ಬೀಗ ಹಾಕಿಕೊಂಡು ಹೋಗುತ್ತೀರಿಯೆ ಎಂದರೆ ಸಾಕ್ಷಿಯೂ ಹೌದು ಎಂದು ನುಡಿಯುತ್ತಾರೆ. ಘಟನೆ ದಿನ ನಿಮ್ಮ ಅಣ್ಣ, ಮನೆಯ ಬೀಗ ಹಾಕಿಕೊಂಡು ಹೋಗಿರುವ ಬಗ್ಗೆ ವಿಚಾರಿಸಿರುತ್ತೀಯೆ ಎಂದರೆ ಸಾಕ್ಷಿಯೂ ಆತ ಬೀಗ ಹಾಕಿಕೊಂಡು ಹೋಗಿದ್ದ ಎಂದು ನುಡಿಯುತ್ತಾರೆ. ನಿಮ್ಮ ಅಣ್ಣ, ನಿಮಗೆ , ನಿಮ್ಮ ತಂದೆ ತೀರಿಕೊಂಡರು ಎಂದು ಹೇಳಿದ ತಕ್ಷಣ ಬೆಂಗಳೂರಿನಿಂದ ನಂಜನಗೂಡಿಗೆ ಬರಲು ಪ್ರಯತ್ನಿಸಿರುತ್ತೀರಿಯೇ ಎಂದರೆ ಸಾಕ್ಷಿಯೂ ಕೂಡಲೇ ಪ್ರಯತಿಸಿರುತ್ತೇನೆ ಎಂದು ನುಡಿಯುತ್ತಾರೆ.

17. ಬೆಂಗಳೂರಿನಲ್ಲಿ ನಂಜಗನೂಡಿಗೆ ಬಸ್ ನಲ್ಲಿ ಬೇಗ ಎಂದರೆ 4 ತಾಸು, ಹೆಚ್ಚು ಕಡಿಮೆ 5 ತಾಸು ಬೇಕಾಗುತ್ತದೆ ಎಂದರೆ ಸರಿ. ಆ ದಿನ ನಾನು ನೇರವಾಗಿ ಹುರಳೇಪುರಕ್ಕೆ ಹೋಗಿರುತ್ತೇನೆ, ನಂಜನಗೂಡಿಗೆ ಬಂದಿರುವುದಿಲ್ಲ. ನಂಜನಗೂಡಿನಿಂದ ಹುರಳೇಪುರಕ್ಕೆ 45 ಕಿ.ಮೀ ಅಂತರಲ್ಲಿರುತ್ತದೆ. ನಂತರ ನಾನು 04.00–04.30 ಕ್ಕೆ ಬೆಂಗಳೂರಿನಿಂದ ಹೊರಟಿರುವುದಿಲ್ಲ. ನಾನು ತಡವಾಗಿ 07.00 ಗಂಟೆಯ ಬಳಿಕ ಬೆಂಗಳೂರಿನಿಂದ ಹೊರಟಿರುತ್ತೇನೆ ಎಂದರೆ ಸರಿಯಲ್ಲ.

18. ನಾವು ನಂಜಗನೂಡು ಮುಖಾಂತರವೇ ಹುರಳೇಪುರಕ್ಕೆ ಹೋಗಬೇಕು ಎಂದರೆ ಸರಿ. ನೀವು ನಿಮ ಅಣ್ಣನಿಗೆ ಬಸ್ ನಲ್ಲಿ ಬರುತ್ತಿದ್ದೇನೆ, ಬಸ್ ಸ್ಟಾಪ್ ಬಳಿ ಬೇಟಿಯಾಗು ಎಂದು ತಿಳಿಸಿರುತ್ತೀರಿಯೇ ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ. ನಂಜಗೂಡಿಗೆ ಇಳಿದು ಪೊಲೀಸ್ ಠಾಣೆಗೆ ಹೋಗಿ ದೂರ ನೀಡಲು ಪ್ರಯತ್ನಿಸಿರುತ್ತೀರಿಯೇ ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ.

19. ನಿಮ್ಮ ತಾಯಿಗೆ ಆರೋಗ್ಯ ಏರು ಪೇರಾಯಿತು ಆ ಕಾರಣಕ್ಕೆ ನೇರವಾಗಿ ಹೋಗಿರುತ್ತೇನೆ ಎಂದು ಹೇಳಿದ್ದು , ನಿಮ್ಮ ತಾಯಿಗೆ ಔಷದೋಪಚಾರ ಮಾಡಿಸಿರುತ್ತೀರಿಯೇ ಎಂದರೆ ಸಾಕ್ಷಿಯೂ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಎಲ್ಲಿ ಮಾಡಿಸಿರುತ್ತೀರಿ ಎಂದರೆ ಸಾಕ್ಷಿಯೂ ಬೊಂಬಲಾಪುರದಲ್ಲಿ ಮಾಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಔಷದೋಪಚಾರ ಮಾಡಿಸಿದ ಬಗ್ಗೆ ಪೊಲೀಸರಿಗೆ ನೀಡಿರುವುದಿಲ್ಲ. ನನ್ನ ತಾಯಿಗೆ ಯಾವುದೇ ರೀತಿಯ ಆರೋಗ್ಯದಲ್ಲಿ ಏರು ಪೇರು ಆಗಿರುವುದಿಲ್ಲ , ಸುಳ್ಳು ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

20. ದಿ.**02.06.2023** ರಂದು ನೀವು, ನಿಮ್ಮ ತಾಯಿ ಮತ್ತು ಸಂಬಂಧಿಕರು ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಗೆ ಬಂದಿರುತ್ತೀರಿ ಎಂದು ಹೇಳಿದ್ದು, ಎಷ್ಟು ಗಂಟೆಗೆ ಬಂದಿರುತ್ತೀರಿ ಎಂದರೆ ಸಾಕ್ಷಿಯೂ ಬೆಳಿಗ್ಗೆ 10.0 ಗಂಟೆಗೆ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನಿಮ್ಮ ಅಣ್ಣ ಪೊಲೀಸ್ ಠಾಣೆ ಯಲ್ಲಿ ಇದ್ದನೇ ಎಂದರೆ ಸಾಕ್ಷಿಯೂ ಅವರು ಪೊಲೀಸ್ ಠಾಣೆಯ ಗೇಟ್ ಬಳಿ ಇದ್ದರು ಎಂದು ನುಡಿಯುತ್ತಾರೆ. ಪೊಲೀಸ್ ಠಾಣೆಯ ಒಳಗಡೆ ನೀವು , ನಿಮ್ಮ ತಾಯಿ ಮತ್ತು ನಿಮ್ಮ ಅಣ್ಣ ಹೋಗಿ ನ್ಯಾಯಾಲಯದ ಮುಂದೆ ಸಾಕ್ಷದಲ್ಲಿ ಹೇಳಿದಂತೆ ಹೇಳಿಕೆಗಳನ್ನು ನೀಡಿರುತ್ತೀರಿಯೇ ಎಂದರೆ ಸಾಕ್ಷಿಯೂ ಹೌದು ಎಂದು ನುಡಿಯುತ್ತಾರೆ.

21. ಪೊಲೀಸ್ ಠಾಣೆಯಿಂದ ಕೆ ಆರ್ ಆಸ್ಪತ್ರೆಗೆ ಸುಮಾರು 11.00 ಗಂಟೆಗೆ ಬಂದಿರುತ್ತೇವೆ. ಮೃತ ದೇಹವನ್ನು ಸಂಜೆ 04.00–04.30 ನಮಗೆ ಹಸ್ತಾಂತರಿಸಿರುತ್ತಾರೆ. ನಾನು ಕೆ ಆರ್ ಆಸ್ಪತ್ರೆಯಲ್ಲಿ ಪುನಃ ಹೇಳಿಕೆಯನ್ನು ನೀಡಿರುತ್ತೇನೆ. ಪೊಲೀಸ್ ಠಾಣೆಗೆ ಹೋದಾಗ ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಮತ್ತು ಕೆ ಆರ್ ಆಸ್ಪತ್ರೆಯಲ್ಲಿ ಹೇಳಿದ ಹೇಳಿಕೆಯಲ್ಲಿ ನಾವು ನನ್ನ ಅಣ್ಣ ಶ್ರೀಕಂಠನ ಮೇಲೆ ಸಂಶಯ ವ್ಯಕ್ತಪಡಿಸಿ ಹೇಳಿಕೆ ನೀಡಿರುತ್ತೇವೆ ಎಂದರೆ ಸರಿಯಲ್ಲ. ಪ್ರಕರಣ ನಮ್ಮ ಅಣ್ಣನ ವಿರುದ್ಧ ಹೋಗುತ್ತದೆ ಎಂದು ಹೇಳಿ, ಸದರಿ ಹೇಳಿಕೆಯನ್ನು ಮುಚ್ಚಿ ಹಾಕಿಸಿ ಬೇರೆ ಹೇಳಿಕೆಯನ್ನು ತಯಾರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಿಮ್ಮ ತಂದೆ ತೀರಿಕೊಂಡಿದ್ದನ್ನು ನೋಡಿದ ಸಮಯದಿಂದ ಮಾರನೇ ದಿನ ನೀವು ಠಾಣೆಗೆ ಹೋಗುವವರೆಗೆ ಯಾವ ಕಾರಣಕ್ಕೆ ದೂರನ್ನು ಪೊಲೀಸರಿಗೆ ನೀಡಿರುವುದಿಲ್ಲ ಎಂದು ನಿಮ್ಮ ಅಣ್ಣನನ್ನು ಪ್ರಶ್ನಿಸಿರುತ್ತೀರಿಯೇ ಎಂದರೆ ಸಾಕ್ಷಿಯೂ ಇಲ್ಲ ಎಂದು ನುಡಿಯುತ್ತಾರೆ.

22. ದಿ.01.06.2023 ರಿಂದ ಮಾರನೇ ದಿನದವರೆಗೆ ನನ್ನ ಅಣ್ಣ, ನನ್ನ ಅತ್ತೆ , ಭಾವ , ಮಾವ ಜೊತೆ ಇದ್ದ ಎಂದರೆ ಸರಿ. ನನ್ನ ತಂದೆಯ ಸಾವಿನಲ್ಲಿ ಆರೋಪಿತರ ಕೈವಾಡ ಇರುವುದಿಲ್ಲ , ನನ್ನ ಅಣ್ಣನ ಕೈವಾಡ ಇರುವುದು ಕಂಡು ಬರುತ್ತದೆ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ಹುಣಸಾನಾಳು ಗ್ರಾಮದಲ್ಲಿ ನನ್ನ ಅಣ್ಣ, ಆತನ ಅತ್ತೆ ಮಾವನ ಜೂತೆ , ನಾವು ಹೋಗುವವರೆಗೆ ಆರಾಮಾಗಿ ಇದ್ದ ಎಂದರೆ ಸರಿಯಲ್ಲ.

23. ಆರೋಪಿತರು ಹುಣಸನಾಳು ಗ್ರಾಮದಲ್ಲಿ ಪ್ರತ್ಯೇಕ ಮನೆ ಕಟ್ಟಿಕೊಂಡು , ಪ್ರತ್ಯೇಕವಾಗಿ ವಾಸ ಇರುತ್ತಾರೆ ಎಂದರೆ ಸರಿ.

24. ನಿಮ್ಮ ಮಖ್ಯ ವಿಚಾರಣೆಯಲ್ಲಿ 'ನನ್ನ ಪ್ರಾಥಮಿಕ ವಿದ್ಯಾಭ್ಯಾಸ ಬೆಳವಾಡಿ ಗ್ರಾಮದಲ್ಲಿ ಆಗಿತ್ತು. ಆ ಸಮಯದಲ್ಲಿ ನಾನು ನನ್ನ ಅಜ್ಜಿಯ ಜೊತೆ ಇದ್ದೆನು. ನಂತರ 10 ನೇ ತರಗತಿ ಕೂಡ್ಲಪುರದಲ್ಲಿ ಆಗಿರುತ್ತದೆ. ಕೂಡ್ಲಾಪುರದಲ್ಲಿ ಶಾಲೆಗೆ ಹೋಗುವ ಕಾಲದಲ್ಲಿ ನಮ್ಮ ತಂದೆಯ ಹುಣಸನಾಳು ಗ್ರಾಮದಲ್ಲಿ

ನಮ್ಮ ತಂದೆಯ ಜೊತೆ ವಾಸವಿದ್ದೇನು. ಹುಣಸನಾಳು ಗ್ರಾಮದಲ್ಲಿ ನಾನು, ನನ್ನ ತಂದೆ ಮತ್ತು ನನ್ನ ಅಣ್ಣ ವಾಸವಿದ್ದೇವು. ನನ್ನ ತಂದೆಯ ಮೊದಲನೆ ಹೆಂಡತಿ ಮತ್ತು ಮಕ್ಕಳು ಪ್ರತ್ಯೇಕವಾಗಿ ವಾಸವಿರುತ್ತಿದ್ದರು. ' ಎಂದು ಹೇಳಿದ್ದು, ಈ ರೀತಿ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೀರಿಯೇ ಎಂದರೆ ಸಾಕ್ಷಿಯೂ ಹೌದು ಎಂದು ನುಡಿಯುತ್ತಾರೆ.

25. ನಿಮ್ಮ ಮುಖ್ಯ ವಿಚಾರಣೆಯಲ್ಲಿ '2011 ರಿಂದ ನಾನು ಹುಣಸನಾಳುದಲ್ಲಿ ವಾಸವಿರಲು ಪ್ರಾರಂಭಿಸಿರುತ್ತೇನೆ. ಅದಕ್ಕೂ ಮುಂಚೆ ನಾನು ಬೆಳವಾಡಿಯಿಂದ ಬಂದು ಹೋಗಿ ಮಾಡುತ್ತಿದ್ದೆನು. 2012 ರಲ್ಲಿ ನನ್ನ ತಂದೆಗೆ ಸೇರಿದ ಜಮೀನಿನ ವಿಚಾರಕ್ಕೆ ನನ್ನ ತಂದೆ ಮತ್ತು ಅವರ ಮೊದಲನೆ ಹೆಂಡತಿ ಬಸಮ್ಮ ಮತ್ತು ಅವರ ಮಕ್ಕಳ ನಡುವೆ ಗಲಾಟೆ ಪ್ರಾರಂಭವಾಯಿತು. ಆ ವಿಚಾರಕ್ಕೆ ಸಂಬದಪಟ್ಟಂತೆ ನನ್ನ ತಂದೆ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ ಯಲ್ಲಿ ದೂರನ್ನು ನೀಡಿದ್ದರು. ತದನಂತರ 1 ನೇ ಆರೋಪಿ ನಂಜನಗೂಡು ನ್ಯಾಯಾಲಯದಲ್ಲಿ ಸಿವಿಲ್ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ ನನ್ನ ತಂದೆಯ ಪರವಾಗಿ 2017 ರಲ್ಲಿ ಆದೇಶವಾಗಿರುತ್ತದೆ. ನಂತರ 1 ನೇ ಆರೋಪಿ ಸದರಿ ಆದೇಶದ ವಿರುದ್ದ ಮೈಸೂರು ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿ ಕೂಡ ನನ್ನ ತಂದೆಯ ಪರವಾಗಿ ಆದೇಶ ಆಗಿರುತ್ತದೆ. ನಂತರ 1 ನೇ ಆರೋಪಿ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಅಲ್ಲಿಯೂ ಕೂಡ ನಮ್ಮ ತಂದೆಯ ಪರವಾಗಿ ಆದೇಶವಾಗಿರುತ್ತದೆ. ' ಎಂದು ಹೇಳಿದ್ದು, ಈ ರೀತಿ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೀರಿಯೇ ಎಂದರೆ ಸಾಕ್ಷಿಯೂ ಹೌದು ಎಂದು ನುಡಿಯುತ್ತಾರೆ.

26. ನಿಮ್ಮ ಮುಖ್ಯ ವಿಚಾರಣೆಯಲ್ಲಿ 'ಸದರಿ ಜಮೀನಿನ ವಿಚಾರಕ್ಕೆ ಗಲಾಟೆ ಪ್ರಾರಂಭವಾದ ನಂತರ ಆರೋಪಿತರು ನಮ ತಂದೆಯ ಮೇಲೆ ಗಲಾಟೆ ಮಾಡಿ ನಮ್ಮ ತಾಯಿಗೂ ಸಹ ಹಲ್ಲೆ ಮಾಡಿದ್ದರಿಂದ,

ನಮ್ಮ ತಂದೆ 2017 ರಲ್ಲಿ ಸದರಿ ಹುಣಸನಾಳು ಬಿಟ್ಟು, ಹುಲ್ಲೇಪುರ, ಗುಂಡ್ಲುಪೇಟೆ ತಾಲೂಕಿನಲ್ಲಿ ಬಂದು ವಾಸ ಮಾಡಲು ಪ್ರಾರಂಬಿಸಿರುತ್ತೇವೆ. ನನ್ನ ಅಣ್ಣನಿಗೆ ಮದುವೆಯೂದ್ದರಿಂದ ಆತ ಹುಣಸನಾಳುನಲ್ಲಿಯೇ ವಾಸ ಮಾಡಿ, ನನ್ನ ತಂದೆಯ ಜಮಿನೀನನ್ನು ನೋಡಿಕೊಳ್ಳುತಿದ್ದನು. ನನ್ನ ತಂದೆ ಜಮೀನಿಗೆ ಬಂದು ಹೋಗಿ ಮಾಡುತ್ತಿದ್ದರು ' ಎಂದು ಹೇಳಿದ್ದು, ಈ ರೀತಿ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೀರಿಯೇ ಎಂದರೆ ಸಾಕ್ಷಿಯೂ ಹೌದು ಎಂದು ನುಡಿಯುತ್ತಾರೆ.

27. ನಿಮ್ಮ ಮುಖ್ಯ ವಿಚಾರಣೆಯಲ್ಲಿ 'ಅದೇ ಸಮಯದಲ್ಲಿ ನಮ್ಮ ತಂದೆ ಸೈಟ್ ನ್ನು ಅಳತೆ ಮಾಡಲು ಸೈಟ್ ಬಳಿ ಬಂದಿದ್ದು, ಗ್ರಾಮ ಪಂಚಾಯಿತಿಯವರು ಕೂಡ ಬಂದಿರುತ್ತಾರೆ. ' ಎಂದು ಹೇಳಿದ್ದು, ಈ ರೀತಿ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೀರಿಯೇ ಎಂದರೆ ಸಾಕ್ಷಿಯೂ ಹೌದು ಎಂದು ನುಡಿಯುತ್ತಾರೆ.

28. ನಿಮ್ಮ ಮುಖ್ಯ ವಿಚಾರಣೆಯಲ್ಲಿ 'ಆ ದಿನ ಮದ್ಯಾಹ್ನ 01.00 ಗಂಟೆ ಸುಮಾರಿಗೆ ನನ್ನ ತಾಯಿ ನನಗೆ ಪೋನ್ ಕರೆ ಮಾಡಿ ನನ್ನ ತಂದೆ ಸೈಟ್ ಬಳಿ ಹೋಗಿರುತ್ತಾರೆ, ಪೋನ್ ತಲುಪುತ್ತಿಲ್ಲ ಎಂದು ತಿಳಿಸಿದರು. ' ಎಂದು ಹೇಳಿದ್ದು, ಈ ರೀತಿ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೀರಿಯೇ ಎಂದರೆ ಸಾಕ್ಷಿಯೂ ಹೌದು ಎಂದು ನುಡಿಯುತ್ತಾರೆ.

29. ನಿಮ್ಮ ಮುಖ್ಯ ವಿಚಾರಣೆಯಲ್ಲಿ 'ನಂತರ ನಾನು ನನ್ನ ಅಣ್ಣನಿಗೆ ಪೋನ್ ಕರೆ ಮಾಡಿ, ಹುಣಸನಾಳು ಮನೆಯ ಬಳಿ ಹೋಗಿ ನೋಡು ಎಂದು ತಿಳಿಸಿರುತ್ತೇನೆ. ಆಗ ನನ್ನ ಅಣ್ಣ ತಾನು ಜಮೀನಿನ ಬಳಿ ಇರುವುದಾಗಿ ತಿಳಿಸಿದನು. ನನ್ನ ಅಣ್ಣ ಹುಣಸನಾಳುವಿನ ಮನೆಯ ಬಳಿ ಹೋಗಿ ನೋಡಿ , 04.00-04.30 ರ ಸುಮಾರಿಗೆ ನನಗೆ ಪೋನ್ ಕರೆ ಮಾಡಿದ್ದು, ಆತ ತುಂಬಾ

ಗಾಬರಿಯಲ್ಲಿದ್ದೆನು.' ಎಂದು ಹೇಳಿದ್ದು, ಈ ರೀತಿ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೀರಿಯೇ ಎಂದರೆ ಸಾಕ್ಷಿಯೂ ಹೌದು ಎಂದು ನುಡಿಯುತ್ತಾರೆ.

30. ನಿಮ್ಮ ಮುಖ್ಯ ವಿಚಾರಣೆಯಲ್ಲಿ 'ಅವರು ಮಾತನಾಡುತ್ತಿಲ್ಲ ಎಂದು ತಿಳಿಸಿದನು. ನಾನು ನನ್ನ ಅಣ್ಣನಿಗೆ, ನನ್ನ ತಂದೆಗೆ ಜೀವ ಇರಬಹುದು ನೋಡು ಎಂದು ತಿಳಿಸಿದಾಗ, ಆತ ನಾನು ನೋಡಿರುತ್ತೇನೆ, ಅವರಿಗೆ ಜೀವ ಇರುವುದಿಲ್ಲ ಎಂದು ನನಗೆ ತಿಳಿಸಿದ. ಆತ ತುಂಬಾ ಗಾಬರಿಯಲ್ಲಿದ್ದನು. ನಂತರ ಆತ ಶೆಡ್ ನ ಒಳಗಡೆ ಹೋಗಿರುವುದಿಲ್ಲ. ನಂತರ ನಾನು ಆತನಿಗೆ ನೀನು ನಂಜನಗೂಡಿನ ನಿನ್ನ ಅತ್ತೆಯ ಮನೆಗೆ ಹೋಗು, ನಾನು ಬೆಂಗಳೂರಿನಿಂದ ಬರುತ್ತೇನೆ ಎಂದು ತಿಳಿಸಿದೆನು. ' ಎಂದು ಹೇಳಿದ್ದು, ಈ ರೀತಿ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೀರಿಯೇ ಎಂದರೆ ಸಾಕ್ಷಿಯೂ ಹೌದು ಎಂದು ನುಡಿಯುತ್ತಾರೆ.

31. ನಿಮ್ಮ ಮುಖ್ಯ ವಿಚಾರಣೆಯಲ್ಲಿ, 'ನಾನು ಬೆಂಗಳೂರಿನಿಂದ ಬರುವುದು ತಡವಾಗಿರುತ್ತದೆ. ಅಷ್ಟರಲ್ಲಿ ಹುಲ್ಲೇಪುರದಿಂದ ನನ್ನ ಸಂಬಂಧಿಕರು ಫೋನ್ ಕರೆ ಮಾಡಿ ನನ್ನ ತಾಯಿಗೆ ನನ್ನ ತಂದೆಯ ವಿಷಯ ತಿಳಿದು , ಆರೋಗ್ಯದಲ್ಲಿ ಏರುಪೇರಾಗಿ , ಅವರು ಆಘಾತದಲ್ಲಿ ಇರುತ್ತಾರೆ ಎಂದು ತಿಳಿಸಿದರು . ನಂತರ ನಾನು ಹುಲ್ಲೇಪುರಕ್ಕೆ ನನ್ನ ತಾಯಿಯ ಬಳಿ ಹೋಗಿರುತ್ತೇನೆ. ಆಗ ರಾತ್ರಿ 12.30–01.00 ಗಂಟೆಯಾಗಿತ್ತು' ಎಂದು ಹೇಳಿದ್ದು, ಈ ರೀತಿ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೀರಿಯೇ ಎಂದರೆ ಸಾಕ್ಷಿಯೂ ಹೌದು ಎಂದು ನುಡಿಯುತ್ತಾರೆ. ' ಎಂದು ಹೇಳಿದ್ದು, ಈ ರೀತಿ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೀರಿಯೇ ಎಂದರೆ ಸಾಕ್ಷಿಯೂ ಹೌದು ಎಂದು ನುಡಿಯುತ್ತಾರೆ.

32. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ಯಾವುದೇ ವಿಚಾರಗಳನ್ನು ಪೊಲೀಸರ ಮುಂದೆ ಹೇಳಿರುವುದಿಲ್ಲ. ನನ್ನ ಅಣ್ಣನ ಮೇಲೆ ಆರೋಪ ಬರುತ್ತದೆ ಎಂದು ಹೇಳಿ, ನ್ಯಾಯಾಲಯದ ಮುಂದೆ

ಸುಳ್ಳು ಸಾಕ್ಷಿ ನುಡಿಯುತ್ತಿದೇನೆ ಎಂದರೆ ಸರಿಯಲ್ಲ. ಹುಣಸನಾಳಿನ ಸ್ಿದ್ದಯ್ಯು ರವರಿಂದ ಘಟನೆ ಬಗ್ಗೆ ವಿವರ ತಿಳಿಯಿತು ಎಂದು ಹೇಳಿರುವ ವಿಚಾರ ಸುಳ್ಳು, ಸಿದ್ದಯ ಆ ರೀತಿ ಯಾವುದೆ ವಿವರಗಳನ್ನು ನನಗೆ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.